ಏನೂ ಉಚ್ಚರಿಸಲಿಲ್ಲ.

"ಹ್ಹಹ್ಹಹ್ಹ!" ಎಂದೊಮ್ಮೆ ಗಹಗಹಿಸಿ, "ಬಾ ಒಳಗೆ..." ಎಂದು ಕರೆದು ಸ್ಮಶಾನದೊಳಗೆ ಹೋಯಿತು ಆ ದೇಹ. ಕತ್ತಲೆಯಲ್ಲಿ ಅದರ ಮೈಮೇಲಿನ ವಸ್ತ್ರಗಳು ಸರಿಯಾಗಿ ಕಾಣಿಸುತ್ತಿರಲಿಲ್ಲ. ಆ ಆಕೃತಿ ಮುಂದೆ ಹೋಗಿ ಒಂದು ಸಮಾಧಿಯ ಮೇಲೆ ಕುಳಿತುಕೊಂಡಿತು. ಪ್ರದೀಪನಿಗೆ ನಡೆಯಲು ಕಷ್ಟವಾಯಿತು. ಕಲ್ಲು ಮುಳ್ಳು ಕಾಲಿಗೆ ತಾಗಿ ಎಡವಿ ಬೀಳುವುದನ್ನು ಕಷ್ಟಪಟ್ಟು ತಪ್ಪಿಸಿಕೊಂಡು ಅಲ್ಲಿಗೆ ಹೋದನಾತ.

ಪ್ರದೀಪನೇ ಮಾತಿಗಿಳಿದು, "ನೀನ್ಯಾರು? ಈ ಹೊತ್ತಿನಲ್ಲಿ ಇಲ್ಲೇನು ಮಾಡುತ್ತಿದ್ದೀ? ಎಲ್ಲಿಂದ ಬಂದಿದ್ದೀ" ಎಂದು ಪ್ರಶ್ನೆಗಳ ಬಾಣ ಸುರಿಸಿದ.

"ಸತ್ಯ ಹೇಳುತ್ತಿದ್ದೇನೆ. ನಾನು ದಿನಾ ಇಲ್ಲಿ ಓಡಾಡುತ್ತೇನೆ" ಎಂದಿತು ಸಮಾಧಿ ಮೇಲೆ ಕುಳಿತ ಆಕೃತಿ. ಗಾಢ ಕತ್ತಲೆಯಲ್ಲಿ ಮಾತನಾಡುವ ಮುಖ ಕಾಣಿಸುತ್ತಿರಲಿಲ್ಲ. "ಸಿಕ್ಕಾಪಟ್ಟೆ ಸೆಖೆ ಅಲ್ವಾ. ಒಳಗೆ ಬೇಯುತ್ತದೆ. ಅದಕ್ಕೆ ತಂಪು ಗಾಳಿ ಸವಿಯಲು ರಾತ್ರಿ ಹೊತ್ತು ಹೊರಗೆ ಬರುತ್ತೇವೆ. ಈಗ ಅಲ್ಲಿ ಜಾಗಿಂಗ್ ಮಾಡುತ್ತಾ ಓಡಿದನಲ್ವಾ ಆತ ನನ್ನ ಪಕ್ಕದವ."

ಪ್ರದೀಪನಿಗೆ ಅರ್ಥವಾಗಲಿಲ್ಲ. "ಎಲ್ಲಿ ನಿಮ್ಮ ಮನೆ?" ಎಂದು ಪ್ರಶ್ನಿಸಿದ.

"ಅಷ್ಟೂ ಗೊತ್ತಾಗುವುದಿಲ್ವಾ?" ಎಂದುತ್ತರಿಸಿ ಕೆಲ ಹೊತ್ತು ಗಹಗಹಿಸಿ ವಿಕೃತವಾಗಿ ನಕ್ಕಿತು ಆ ಕರಿ ಆಕೃತಿ. "ನಾನು ಸತ್ತು ಹೋಗಿ ಹನ್ನೆರಡು ವರ್ಷಗಳಾಯಿತು. ನಮ್ಮ ಮನೆ ಇದೇ! ಈ ಸ್ಮಶಾನವೇ ನಮ್ಮ ವಾಸಸ್ಥಾನ. ಅವನದು... ಓ ಅಲ್ಲಿದೆ ನೋಡಿ ಅದು, ಸಮಾಧಿ. ಇದೇ ನನ್ನ ಸಮಾಧಿ. ಸೆಖೆ ಅಲ್ವಾ... ಒಳಗೆ ಜೋರು ಬಿಸಿ ಮಾರಾಯ! ಹಾಗಾಗಿ ಹೊರಗೆ ಬಂದಿದ್ದೇವೆ. ಹ್ಹಹ್ಹಹ್ಹ!" ಎಂದು ಕಿಸಿಯುತ್ತಾ ಆ ಆಕೃತಿ ಒಮ್ಮೆಲೆ ಎದ್ದು ನಿಂತಿತು.

★★★

ರಾಜ್ಯದ ಪ್ರಮುಖ ದಿನಪತ್ರಿಕೆಯ ಮಂಗಳೂರಿನ ಕಚೇರಿಯಲ್ಲಿ ಪತ್ರಿಕೆಗಳನ್ನು ಪರಿಶೀಲಿಸುತ್ತಿದ್ದ ಪ್ರದೀಪನಿಗೆ ಒಂದು ಸುದ್ದಿ ಗಮನ ಸೆಳೆದಿತ್ತು. ಆತ ವರದಿಗಾರನಾಗಿ ಸಾಕಷ್ಟು ಹೆಸರು ಗಳಿಸಿದ್ದ. ಕ್ರೈಮ್ ರಿಪೋರ್ಟಿಂಗ್‌ನಲ್ಲಿ ಆತನದು ಎತ್ತಿದ ಕೈ. ನಗರದಿಂದ ಸುಮಾರು 75 ಕಿ.ಮೀ. ದೂರದ ಒಂದು ಊರಿನಲ್ಲಿ ಇತ್ತೀಚೆಗೆ ಅಸಹಜ ಸಾವುಗಳು ಮೇಲಿಂದ ಮೇಲೆ ವರದಿಯಾಗುತ್ತಿದ್ದವು. ವಿಚಿತ್ರವೇನೆಂದರೆ ಆ ಸಾವುಗಳು ಆಗುತ್ತಿದ್ದ ರೀತಿ. ಊರಿನ ಸ್ಮಶಾನದ ಬಳಿಯಲ್ಲೇ ಶವಗಳು ಅನಾಥವಾಗಿ ಬಿದ್ದಿರುತ್ತಿದ್ದವು. ಈ ಹಿಂದಿನ ಯಾವುದೇ ಸಾವಿಗೆ ನಿಖರ ಕಾರಣ ಪತ್ತೆಯಾಗಿರಲಿಲ್ಲ. ಪೊಲೀಸರು ತಲೆ ಕೆಡಿಸಿಕೊಂಡು ತನಿಖೆ ನಡೆಸಿದರೂ ಯಾವುದೇ ಪ್ರಯೋಜನವಾಗಿರಲಿಲ್ಲ.

ಪ್ರದೀಪನಿಗೆ ಕುತೂಹಲ ಮೂಡಿಸಿದ್ದು ಇದಲ್ಲ. ಈ ಎಲ್ಲಾ ಸಾವುಗಳಿಗೆ ದೆವ್ವದ ಕಾಟವೇ ಕಾರಣ ಎಂದು ಜನರು ಮಾತಾಡಿಕೊಂಡಿದ್ದರ ಬಗ್ಗೆ ವರದಿಯಲ್ಲಿ ಉಲ್ಲೇಖಿಸಲಾಗಿತ್ತು.

ಕ್ರೈಮ್ ವರದಿಗಾರಿಕೆಯಲ್ಲಿ ಸಾಕಷ್ಟು ಪಳಗಿದ್ದ ಪ್ರದೀಪನಿಗೆ ಇದರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಉತ್ಸಾಹವಾಯಿತು. ಇಂತಹ ವದಂತಿಗಳ ಹಿಂದೆ ಏನಾದರೂ ಮಸಲತ್ತು ಇದ್ದೇ ಇರುತ್ತದೆ ಎನ್ನುವ ಅರಿವು, ಅನುಭವ ಆತನಿಗಿತ್ತು.

ಕೆಲ ದಿನಗಳ ಪ್ರಯತ್ನದಲ್ಲಿ ಆ ಊರಿನಲ್ಲಿ ನಡೆದ ಸಾವುಗಳ ಬಗ್ಗೆ ಹಿಂದಿನ ವರದಿಗಳನ್ನೋದಿ ಮಾಹಿತಿ ಸಂಗ್ರಹಿಸಿದ ಪ್ರದೀಪ್, ತಾನೇ ಈ ರಹಸ್ಯವನ್ನು ಭೇದಿಸಲು ನಿರ್ಧರಿಸಿದ.

ವಿವರ ಕಲೆಹಾಕುತ್ತಿದ್ದ ಪ್ರದೀಪನಿಗೆ ದೊರಕಿದ ಮಾಹಿತಿಗಳು ಬೆಚ್ಚಿ ಬೀಳಿಸುವಂತಿದ್ದವು.